ಉ) ಉದ್ಭವಿಸುವುದಿಲ್ಲ. ಅಧ್ಯಕ್ಷರು ಲಿಖಿತವಾಗಿಯಾಗಲೀ, ಬಾಯಿ ಮಾತಿನಲ್ಲಾಗಲೀ ಆದೇಶವನ್ನು ಹೊರಡಿಸಿರುವುದಿಲ್ಲ. ರಾಜಭಾಷಾ ಅಧಿನಿಯಮ ೧೯೬೩ರ ಕೆಳಗೆ ಹೊರಡಿಸಲಾದ ಆದೇಶಗಳನ್ನು ಕಾರ್ಯಗತಗೊಳಿಸಲು ಮಂಜವಿ ಮಾಡಿದ್ದಾರೆ.

ಊ) ರೂ. ೧.೩೫,೪೦೮-೬೦.

ವಿಧಾನಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೪೦೬ (ಆ) ಉತ್ತರಕ್ಕೆ ಅನುಬಂಧ

ಕನ್ನಡ ಕಾಪಲು ಮತ್ತು ಗಡಿ ಸಲಹಾ ಸಮಿತಿ ಕಾರ್ಯಕ್ರಮಗಳು:

ಕರ್ತವ್ಯಗಳು;

ಅ) ಮಹಾಜನ್ ಆಯೋಗದ ವರದಿಯ ಚೌಕಟ್ಟಿನಲ್ಲಿ ಗಡಿ ವಿಷಯವಾಗಿ ರಾಜ್ಯ ಸರ್ಕಾರಕ್ಕೆ ಸೂಕ್ತ ಸಲಹೆಗಳನ್ನು ನೀಡುವುದು.

ಆ) ಸರ್ಕಾರದ ರಾಜ್ಯಭಾಷಾ ನೀತಿಯನ್ನು ಜಾರಿಗೆ ತರಲು ಎಲ್ಲಾ ಇಲಾಖೆಗಳು ಕಟ್ಟುನಿಟ್ಟಾಗಿ ಪ್ರಯತ್ನಿಸಿರುವುದೇ?

ಇ) ಈ ಪ್ರಯತ್ನಗಳಲ್ಲಿ ಏನಾದರೂ ನ್ಯೂನತೆಗಳು ಕಂಡುಬಂದಿರುವುದೇ, ಹಾಗಿದ್ದರೆ ಅವುಗಳು ಯಾವುವು?

ಈ) ಈ ನ್ಯೂನತೆಗಳಿಗೆ ಯಾರು ಅಥವಾ ಏನು ಕಾರಣವಾಗಿರುವುದು?

ಉ) ಈ ನ್ಯೂನತೆಗಳನ್ನು ಹೋಗಲಾಡಿಸಲು ಸಲಹೆಗಳೇನು?

ಊ) ಸರ್ಕಾರದ ನೀತಿಯನ್ನು ಅತ್ಯಂತ ತ್ವರಿತವಾಗಿ ಮತ್ತು ಅತ್ಯಂತ ತೃಪ್ತಕರವಾಗಿ ಕಾರ್ಯರೂಪಕ್ಕೆ ತರಲು ಏನಾದರೂ ಸಲಹೆಗಳಿವೆಯೇ?

ಪೋಲೀಸ್ ಗೋಲಿಬಾರಿನ ಬಗ್ಗೆ ತನಿಖೆ

೧೬೬ (೪೫೧) ಶ್ರೀ ವಿ. ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ:—

ಡಿಸಂಬರ್ ೧೯೮೮ರಲ್ಲಿ, ಬೆಂಗಳೂರು, ಮೈಸೂರು ಮತ್ತು ತುಮಕೂರಿನಲ್ಲಿ ಹಲವಾರು ಮಂದಿ ಸಾವಿಗೆ ಕಾರಣವಾದ ಪೋಲೀಸ್ ಗೋಲಿಬಾರಿನ ಬಗ್ಗೆ ತನಿಖೆ ನಡೆಸಲು ಆಯೋಗವನ್ನು ಸರ್ಕಾರವು ರಚಿಸಲು ಮಾನ್ಯ ಮುಖ್ಯಮಂತ್ರಿಯವರು ತಿಳಿಸಿರುವ ವಿಷಯವು ನಿಜವೇ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಯವರು).—

ಹೌದು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಜಿ.ಎಸ್. ಆಚಾರ್.—ಮಾನ್ಯ ಅಧ್ಯಕ್ಷರೆ, ನನ್ನ ಮೇಲು ರುಜು ಇರತಕ್ಕ ಈ ಕೆಳಕಂಡ ಸಾರ್ವಜನಿಕ ವಿಚಾರಗಳಿಗೆ ಸಂಬಂಧಪಟ್ಟ ಅರ್ಜಿಗಳನ್ನು ಸಭೆಯ ಮುಂದೆ ಮಂಡಿಸಬಯಸುತ್ತೇನೆ.

ಅ) ಕುಂದಾಪುರ ತಾಲ್ಲೂಕಿನ ಗಂಬಿಹೊಳೆ-ಬಸರೆ ಲೋಕೋಪಯೋಗಿ ರಸ್ತೆಯಿಂದ ಹರಿಜನ ಕಾಲೋನಿಗೆ ಸೇರುವ ಗ್ರಾಮೀಣ ರಸ್ತೆಯನ್ನು ದುರಸ್ತಿ ಮಾಡುವ ಬಗ್ಗೆ,

ಆ) ಕುಂದಾಪುರ ತಾಲ್ಲೂಕಿನ ಕೊಲ್ಲೂರು ಗ್ರಾಮದ ಕಲ್ಯಾಣಿ ಗುಡ್ಡೆ ಹರಿಜನ ಕಾಲೊನಿಗೆ ನಲ್ಲಿ ನೀರಿನ ಸೌಲಭ್ಯವನ್ನು ಕೊಡುವ ಕುರಿತು,

ಇ) ಕುಂದಾಪುರ ತಾಲ್ಲೂಕಿನ ಕಂಜರ ಕೋಣಿ ಗ್ರಾಮದ ಹಳೆಗೇರಿ, ತೆಂಕಬೆಟ್ಟು, ಕೊಲಾಗಿ ಹರಿಜನ ಕೇರಿಗಳಿಗೆ ನಲ್ಲಿ ನೀರಿನ ಸೌಲಭ್ಯದ ಕುರಿತು.